Regd No M 1299 34 th Year ತಾ| 23—7—51

SATYAVADI

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಸೈ

ಶ್ರೀಮನ್ಮಹಾರಾಜರು ಚಿರಾಯುವಾಗಿರಲಿ

ನಾಳೆಯ ದಿವಸ ಮೈಸೂರು ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ. ಪ್ರಜೆಗಳ ಪ್ರೀತಿವಾತ್ಸಲ್ಯರಾದ ಪ್ರಭುಗಳು ಚಿರಕಾಲ ಬಾಳಲೆಂದು ಭಗವಂತನಲ್ಲಿ ನಮ್ಮ ಪ್ರಾರ್ಥನೆ

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಪ್ರಯುಕ್ತ ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜ.

ರೈಲ್ವೆ ಮುಜೂರರು ದುಗಾಶಾಪೀಡಿತರಾಗಿದ್ದಾರೆ !

ನಿನ್ನೆ ದಿವಸ ಮೈಸೂರ ವುರಭವನದಲ್ಲಿ ನಡೆದ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರು ಸಂಘದ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷ ಶ್ರೀ ಕೆ. ವುಟ್ಟಸ್ವಾಮಿಯವರು ಭಾಷಣ ಮಾಡುತ್ತಾ : ರೈಲ್ವೆ ಕಾರ್ಮಿಕರು ದುರಾಶಾಪೀಡಿತರಾಗಿರುವರು. ರೈಲ್ವೆ ವುುಷ್ಕರ ನಡೆದರೆ ನಾನೇ ರೈಲು ನಡೆಸಲು ಸಮರ್ಥನಿದ್ದೇನೆ— ಎಂದರು.

= OPERA = ಉಡ್‌ಲ್ಯಾಂಡ್

July 21 st

Shakespeare's Immortal Play
An entertainment for World
Audience

HENRY V
(Technicolor)

Starring — Laurence Olivier, Renee Asherson, Leslie Banks, Robert Newto

Next — BONNIE PRINCE CHARLIE
(Technicolor)

ದುಲ್ಖರ್ ಪಂಜೋಲಿಯವರ

ನಗೀನಾ

— 3 ನೇ ವಾರ —

— ಪಾತ್ರ —

ನೂತನ, ನಾಸಿರ್-ಖಾನ್, ಗೋಪ್

ಪ್ರತಿ ದಿನ 3 ಪ್ರದರ್ಶನಗಳು

ಸತ್ಯವಾದಿ

ಸತ್ಯವಾದಿ ಸೋಮವಾರ ಸಂಚಿಕೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1—14—0

ರಣಜಿತ್ ಅಮೋಘ 3 ನೇ ವಾರ

ಅಶೋಕಕುಮಾರ್, ನಿಮ್ಮಿ, ದಿಲೀಪಕುಮಾರ್, ನರ್ಗಿಸ್ ನಟಿಸಿರುವ

ದೀದಾರ್ [ಹಿಂದಿ] Deedar

ಪ್ರತಿ ದಿನ 3 ಆಟಗಳು

ಕಿದ್ವಾಯಿ, ಜೈಕ್ ಸಚಿವರಾಗಿರಲು ಸಾಧ್ಯವಿಲ್ಲ !

ಶ್ರೀಗಳಾದ ಕಿದ್ವಾಯಿ ಮತ್ತು ಜೈಕ್ ಸಚಿವ ಮಂಡಲದಲ್ಲಿ ಮುಂದುವರಿಯಬೇಕೆಂದು ಒಪ್ಪಿ ವಿರೋಧ ಪಕ್ಷದಲ್ಲಿ ಕಾರ್ಯಕ್ರಮ ಕೈಗೊಳ್ಳಲು ಅವಕಾಶವಿತ್ತಿರುವುದು ಶಂಕೆಗಾಸ್ಪದ ಎಂದು ಬಾಬು ತಂಡಕ್ ತಿಳಿಸಿದ್ದಾರೆ. ಈ ವಿದ್ಯಾಟು ಅಸಾಧ್ಯ ಪರಿಸ್ಥಿತಿಯನ್ನು ಮಾಡುವದೆಂದು ಅವರು ತಿಳಿಸಿದ್ದಾರೆ.

— ಕಲ್ಕತ್ತಾದಲ್ಲಿ ನಿನ್ನೆ ಸೇರಿದ್ದ ಅಖಿಲ ಭಾರತ ರೈಲ್ವೆ ಫೆಡರೇಷನ್ ಕಾರ್ಯಕಾರಿ ಸಮಿತಿ ಸಂಧಾನ ಕೈಗೊಳ್ಳುವ ನಿರ್ಣಯಕ್ಕೆ ಬಂದಿದೆ. 10 ನೇ ತಾ| ನೊಳಗೆ ಮುಷ್ಕರ ನೋಟಿಸನ್ನು ಅಂಗಸಂಸ್ಥೆಗಳು ಕೊಡಬೇಕೆಂದು ಸಲಹೆ ಮಾಡಲಾಗಿದೆ. ಮುಷ್ಕರ ನಿರೋಧ ಆರ್ಡಿನೆನ್ಸನ್ನು ಖಂಡಿಸಲಾಯಿತು.

ದಿವ್ಯವಾಣಿ

ಅಳಿಯಲು ಮನದೊಳು ಭೀತಿ.
ಭೀತಿಯಿಲ್ಲದಿರಲೆ ಜಯ. ಅಂಜುವದೆ ಸೋಲು ನಿಶ್ಚಯ. — ವಿ. ವಿ.

ಮುಂದಿನ ತಿಂಗಳಿಂದ ಬರುತ್ತದೆ

ಮುಂದಿನ ತಿಂಗಳು 22 ಹಡಗುಗಳ ಧಾನ್ಯವನ್ನು ತೆಗೆದುಕೊಂಡು ಭಾರತಕ್ಕೆ ತೆಳುವದೆಂದು ಲಂಡನ್ ವರ್ತೆ. ಪ್ರತಿ ಹಡಗಿನಲ್ಲೂ ಸಾಧಾರಣ 9 ವರೆ ಸಹಸ್ರ ಟನ್ ಗೋಧಿ ಸಾಗುವುದು.

ಅಮೇರಿಕ ಸಂಘದವರ ದಾನ

ಬೊಂಬಾಯಿ ತಾಜಮಹಲ್ ಹೋಟಿಲಿನಲ್ಲಿ ಈ ಬಾರಿ ಅಮೆರಿಕ ಸಂಘದ ನೃತ್ಯ ನಡೆದು ಉತ್ಪತ್ತಿಯಾದ ರೂ. ಗಳನ್ನು ಆಸ್ಪತ್ರೆ ಹಾಗೂ ಶಾಲೆಗಳಿಗೆ ಹಂಚಲಾಯಿತು.

ಶಾಂತಿ ಬೇಕು

ಭಾರತ ಶಾಂತಿ ಅಪೇಕ್ಷೆ ಮಾಡುವದು — ಎಂದು ಚಿದಂಬರದಲ್ಲಿ ವಿದೇಶ ಶಾಖೆಯ ಉಪ ಸಚಿವ ಡಾ|| ಕೇಸ್ಕರರು ತಿಳಿಸಿರುವರು.

ದಿನಾಚರಣೆ

ಸೂರತ್, ಅಹಮದಾಬಾದ್ ಮತ್ತು ಕಾಶಿಯಲ್ಲಿ ಬಟ್ಟೆ ಮತ್ತು ಧಾನ್ಯ ವರ್ತಕರು ಮೊನ್ನೆ ನಿಯಂತ್ರಣ ವಿರೋಧ ದಿನಾಚರಣೆ ಆಚರಿಸಿದರು

ಜಯಪ್ರಕಾಶರ ಬೋಧನೆ

ಸಂಧಾನಗಳೆಲ್ಲ ಫಲಕಾರಿ ಆಗದುದರಿಂದ ರೈಲ್ವೆ ಕಾರ್ಮಿಕರು ಮುಂದಿನ ತಿಂಗಳು 27 ನೆ ತಾ| ಮುಷ್ಕರ ಮಾಡಲು ಸಿದ್ಧರಿರಬೇಕೆಂದು ಶ್ರೀ ಜಯಪ್ರಕಾಶರು ಅಸಾರ್ ಸಾಲಿನಲ್ಲಿ ತಿಳಿಸಿರುವರು

ವಾರ್ಷಿಕೋತ್ಸವ

ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರ ಘನ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಮೈಸೂರು ರಂಗಾಚಾರ್ಲು ಪುರಭವನದಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್‌ನ ಕೆಲಸಗಾರರ ಸಂಘದ ವಾರ್ಷಿಕೋತ್ಸವ ನೆಂಪೇರಿತು.

ಪಾಲ್ಮನಿಗೆ ಗಾಂಧಿ ಪಾತ್ರ

ಗಾಂಧಿ ಜೀವನ ಚರಿತ್ರೆ ಚಿತ್ರದಲ್ಲಿ ಗಾಂಧಿಯವರ ಪಾತ್ರವನ್ನು ಪಾಲ್ಮನಿ ನಿರ್ವಹಿಸುವರೆಂದು ಗೊತ್ತಾಗಿದೆ ಬರುವ ವರ್ಷದ ಕೊನೆಯಲ್ಲಿ ಚಿತ್ರ ತಯಾರಿಕೆ ಮುಗಿಯುವದು.

ಕಟ್ಟಿಲೆ ಮೀರಿದ್ದಾರೆ

ಸಂಯುಕ್ತ ರಾಷ್ಟ್ರಸಂಘದ ಎಲಿಟರಿ ನಿರೀಕ್ಷಕನೊಬ್ಬನು ಕಾಶ್ಮೀರದ ಕಾಲ್ಪನಿಕ ಕಟ್ಟಳೆಗಳನ್ನು ವಿಧಿಸಿದ ಉದಾಹರಣೆಯೊಂದನ್ನು ಕಾಶ್ಮೀರ ಸರ್ಕಾರ ಭಾರತದ ಲಕ್ಷ್ಯಕ್ಕೆ ತಂದಿದೆ. ಕೆನಡದ ಕರ್ನಲ್ ಗೆರಿನು ಮೂರು ತಿಂಗಳು ಪಾಕಿಸ್ತಾನದಲ್ಲಿದ್ದ ತಮ್ಮ ಪತ್ನಿಯನ್ನು ವಿಶ್ವಸಂಸ್ಥೆಯ ಜೀಪಿನಲ್ಲಿ ಕಾಶ್ಮೀರಕ್ಕೆ ಕರೆತಂದಿರುವರು.

ರಾಜೀನಾಮೆ ವಾಪಸು

ಮಂತ್ರಿಮಂಡಲಕ್ಕೆ ಅರ್ಪಿಸಿದ್ದ ರಾಜೀನಾಮೆಯನ್ನು ಶ್ರೀಗಳಾದ ಕಿದ್ವಾಯಿ ಮತ್ತು ಜೈಕ್ ವಾಪಸುತೆಗೆದುಕೊಂಡರು. ಆದರೆ ಕಾಂಗ್ರೆಸಿನಿಂದ ರಾಜೀನಾಮೆ ವಾಪಸು ಪಡೆದಿಲ್ಲ.

ಪಾಕ್ ಪತ್ರದ ಪ್ರಧಾನಾಂಶ

ಪಾಕಿಸ್ತಾನದ ಪ್ರಧಾನಿ ಲಿಯಾಕತರು ಪಂ|| ನೆಹರುವಿಗೆ ಬರೆದ ಪತ್ರದಲ್ಲಿ ಗಡಿಯಲ್ಲಿರುವ ಸೇನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ತಿಳಿಸಿದ್ದಾರೆ.

ಸ್ಥಾಪಕರ ದಿನಾಚರಣೆ

ಮೈಸೂರು : ಈ ದಿನ ಬೆಳಿಗ್ಗೆ ಧರ್ಮ ಪ್ರಕಾಶ ಬನುಮಯ್ಯನವರ ವಿದ್ಯಾ ಸಂಸ್ಥೆ ಸ್ಥಾಪಕರ ದಿನಾಚರಣೆ ಮಾನ್ಯ ಗೃಹ ಮಂತ್ರಿ ಶ್ರೀ ಟಿ ವುರಿಯಪ್ಪನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು. ಪ್ರಾರ್ಥನೆ. ಸಂಗೀತಾನಂತರ ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ. ವಿ. ಬನುವುಯನವರು ಸಂಸ್ಥೆಯ ಪ್ರಗತಿಯನ್ನು ತಿಳಿಸಿದರು. ಅನಂತರ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನ ಕೊಡಲಾಯಿತು. ಸಂಸ್ಥೆ ಕಂಸಾಪಕರ ಬಗೆಗೆ ಅಧ್ಯಕ್ಷರು ಭಾಷಣ ಮಾಡಿದನಂತರ ವಂದನಾರ್ಪಣೆ ಆಗಿ ರಾಷ್ಟ್ರಗೀತೆ ಆದ ನಂತರ ಸಮಾರಂಭ ಮುಗಿಯಿತು.

ಸಂಪುಟ ೯ ಸಂಚಿಕೆ ೪೫ ॥ ಶ್ರೀ ॥ ತಾ॥ 23-7-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಸಿಂಹಳ ದ್ವೀಪವು ಲಂಕೆಯಲ್ಲ

(ಮುಂದುವರಿದುದು)

ಕಾಲಕ್ರಮದಿಂದ ಹಲವಾರು ದ್ವೀಪಗಳೂ ಸಮುದ್ರ ಗರ್ಭದಲ್ಲಿ ಪ್ರವೇಶಿಸುತ್ತದೆ. ಹೇಗೆಂದು ಸ್ಕಾಂದದ ಪ್ರಭಾಸ ಖಂಡದ ೧೭೨ ನೇ ಅಧ್ಯಾಯದಲ್ಲಿ ಹೇಳಿಯೂ ಇದೆ—

ಭವತೋ ನಾಮ ರಾಜಾಭೂದಾಗ್ನೀಧ್ರಃ ಪೃಥಿತಃ ಕ್ಷಿತೌ | ಹ್ಯಸ್ಯೇದಂ ಭಾರತಂವರ್ಷಂ ನಾಮ್ನಾ ಲೋಕೇಷು ಗೀಯತೇ ॥
ಭಾರತಂ ಸವಧಾಕೃತ್ವಾ ಪುತ್ರೇಭ್ಯಃ ಪ್ರದದೌ ಪೃಥಕ್ | ತೇಷಾಂ ನಾಮಾಂಕಿತಾನ್ಯೇವ ತತೋದ್ವೀಪಾನಿ ಜಜ್ಞಿರೇ ॥
ಇಂದ್ರದ್ವೀಪಃ ಕಸೇರುಶ್ಚ ತಾಮ್ರಪರ್ಣೋ ಗಭಸ್ತಿಮಾನ್ | ನಾಗದ್ವೀಪಸ್ತಥಾ ಸೌಮ್ಯೋ ಗಾಂಧರ್ವ ಸ್ತ್ವಥ ವಾರುಣಃ ॥
ಅಯಂ ತು ಸವಸೌದ್ವೀಪಃ ಕುಮಾರ್ಯಾಸಂಜ್ಞಿತಃಪ್ರಿಯೆ | ಅಷ್ಟೌ ದ್ವೀಪಾಃ ಸಮುದ್ರೇಣಪಾಲ್ಯಾವಿತಾಶ್ಚ ತಥಾಪರೇ ॥
ಗಾವ್ಯಾದಿದೇಶಸಂಯುಕ್ತಾಃ ಸ್ಥಿತಾಃ ಸಾಗರಮಧ್ಯಗಾಃ | ಏಕ ಏವ ಸ್ಥಿತಸ್ತೇಷಾಂ ಕುಮಾರ್ಯಾಖ್ಯಸ್ತು ಸಾಂಪ್ರತಂ ॥

ಇದರಿಂದ, ಆ ಕಾಲದಲ್ಲಿ ಪುತ್ರರಿಗೆ ಸಮಾನ ವಿಭಾಗವಾದ್ದರಿಂದ, ಭಾರತ ವರ್ಷದ ಒಂಭತ್ತೂ ಭಾಗಗಳ ವಿಸ್ತಾರವು ಸಮಾನವಾಗಿತ್ತೆಂದು ಗೊತ್ತಾಗುವುದು. ಕಾಲಕ್ರಮದಿಂದ ಆ ಎಂಟು ದ್ವೀಪಗಳ ಹಲವು ಭಾಗಗಳು ಸಮುದ್ರದಲ್ಲಿ ಸೇರಿದ ದರಿಂದ ಅತಿ ಸ್ವಲ್ಪ ಭಾಗಗಳಿಂದ ಅವುಗಳ ಅವಶೇಷವು ಈಗ ತೋರುತ್ತದೆ (ಕ್ರಮಸಂಖ್ಯಾನುಸಾರವಾಗಿ ಮೇಲಿನ 9 ದ್ವೀಪಗಳ ಈಗಿನ ಹೆಸರುಗಳು ಇವು :— 1 ಅಂದಮಾನ, 2 ಸೆಲೆಬೀಸ್, 3 ಸಿಲೋನ್ 4 ಮಲಕ್ಕಾ, 5 ನಿಕ್ಕೋಬಾರ್, 6 ಸುಮಾತ್ರಾ, 7 ಫಿಲಿಪೈನ್ಸ್ 8 ಬೋರ್ನಿಯೋ 9 ಭರತಖಂಡ) — ಈ ರೀತಿಯಿಂದ ಲಂಕಾದ್ವೀಪವೂ ಕೂಡ ಸಮುದ್ರಗರ್ಭಪ್ರವಿಷ್ಟವಾದ್ದರಿಂದ ವಿಲುಪ್ತವಾಗಿರಬಹುದು. ಆದರೆ ಇಷ್ಟು ಮಾತ್ರದಿಂದ ಒಂದು ಸ್ಥಳವನ್ನು ಇನ್ನೊಂದು ಸ್ಥಳದ ಸಂಜ್ಞೆಯಿಂದ ಕರೆಯುವುದು ವಿದ್ವಾಂಸರಿಗೆ ಯುಕ್ತವಾದುದಲ್ಲ ಆದಕಾರಣ ಸಿಂಹಳಕ್ಕೆ ಲಂಕಾಶಬ್ದ ಪ್ರಯೋಗವು ಅತ್ಯಂತಅಜ್ಞಾನನಿಮಿತ್ತವೆಂದು ತಿಳಿಯಬೇಕು

(೧೨) ಅಥವಾ ಈ ಲಂಕೆಯ ಭಗ್ನಾವಶೇಷ ಚಿಹ್ನವು ಈಗಲೂ ಇದ್ದೇಇದೆ ಹೇಗೆಂದರೆ, ಈಗ ಸಿಂಹಳ ದ್ವೀಪದಿಂದ ಪಶ್ಚಿಮಕ್ಕೆ ಅನತಿದೂರದಲ್ಲಿ 'ಲಕ್ಕೇದೀವ್' (Lakkadiv = Laccadive) ಎಂಬ ಯಾವ ಉಪದ್ವೀಪವಿದೆಯೋ ಅದೇ ಹಿಂದೆ ಲಂಕಾದ್ವೀಪವಾಗಿದ್ದಿತೆಂದು ನಿಶ್ಚೈಸುತ್ತೇವೆ ಅದು ಲಂಕಾದ್ವೀಪವಾಗಲು ಅರು ಕಾರಣಗಳಿವೆ.

೧. ಲಕ್ಕೇದೀವ್ ಎಂಬುದರಲ್ಲಿ ನಾವು ಸಾದೃಶ್ಯವು ಕಾಣುವುದರಿಂದ ಅವಶ್ಯವಾಗಿ ಅದು ಲಂಕಾದ್ವೀಪ ಶಬ್ದದ ಇಲ್ಲವೆ ರಕ್ಕೋದ್ವೀಪ ಶಬ್ದದ ಅಪಭ್ರಂಶವಾಗಿರಬೇಕೆಂಬುದು ಒಂದನೆಯದು. (ಶೇಷವು)

ಅನಂತ ಶ್ರೀ ವಿಭೂಷಿತ ಪ. ಪೂ. ಪಾ.
ಶ್ರೀ ಜಗದ್ಗುರು ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀ ಅಭಿನವ
ಸಚ್ಚಿದಾನಂದತೀರ್ಥ ಸ್ವಾಮಿಗಳವರು

ಸೂರತ್ತಿನಲ್ಲಿ ಶ್ರೀದ್ವಾರಕಾ ಜಗದ್ಗುರುಗಳವರು-

(ಸ್ವಂತ ಸುದ್ದಿಗಾರರಿಂದ ತಂತಿ)

ಸೂರತ್ ಜುಲೈ 16 - ಅಹಮದಾಬಾದಿನಲ್ಲಿ ಅನೇಕ ಚಟುವಟಿಕೆಗಳ ಉದ್ದೇಶ ಕಾರ್ಯಕ್ರಮಗಳನ್ನು ಪೂರೈಸಿಕೊಂಡು, ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳವರು ನಿನ್ನೆ ದಿವಸ ಸೂರತ್ತಿಗೆ ಆಗಮಿಸಿ, ಅತ್ಯಾದರದಿಂದ ಸ್ವಾಗತಿಸಲ್ಪಟ್ಟರು. ಶ್ರೀ ಜಗದ್ಗುರುಗಳವರು ಸೂರತ್ತಿನ ವಿಠಲವಾಡಿಯಲ್ಲಿ ತಮ್ಮ ಚಾತುರ್ಮಾಸ್ಯ ಉಪನ್ಯಾಸಗಳನ್ನು ಭಾರಿ ಸಭೆಯಲ್ಲಿ ಪ್ರಾರಂಭಿಸಿದರು. ಸಾರ್ವಜನಿಕರು ತಮ್ಮ ಮತ್ತು ದೇಶದ ಪುರೋಭಿವೃದ್ಧಿಗಾಗಿ ಸನಾತನಧರ್ಮವನ್ನನುಸರಿಸಬೇಕೆಂದು ತಿಳಿಸಿದರು. ತಾ || 18 ನೇ ಬುಧವಾರ ಗುರುಪೂರ್ಣಿಮವು ಅತಿ ವೈಭವದಿಂದ ನೆರವೇರಿಸಲಾಗುವುದು.

ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಪ್ರಭಾವತಿ ರಾಜೆ ರವರು ಬುಲ್ವಾರಿಗೆ ತಾ || 23 ರಲ್ಲೂ, ಸೂರತ್ತಿಗೆ 24 ರಲ್ಲೂ, ಬರೋಡಾಕ್ಕೆ 26 ರಲ್ಲೂ, ಅಹಮದಾಬಾದಿಗೆ 27 ರಲ್ಲೂ, ರಾಮರಾಜ್ಯ ಪರಿಷತ್ತಿನ ಸಂಘಟನೆ, ಪ್ರವಾಸ ಬಗ್ಗೆ, ದಯಮಾಡಿಸಲಿರುವರು. ಪ್ರತಿ ಸ್ಥಳದಲ್ಲೂ ವೈಭವ ಸ್ವಾಗತ ಇತ್ಯಾದಿ ಏರ್ಪಾಡುಗಳಾಗುತ್ತಿವೆ.

ರಾಮರಾಜ್ಯ ಸ್ಥಾಪಿಸಿ

[ಸ್ವಂತ ಸುದ್ದಿಗಾರರಿಂದ ತಂತಿ] ಸೂರತ್, ಜುಲೈ 20 : ಪ್ರಕೃತ ತೊಂದರೆಗಳಿಗೆ ಏಕಮಾತ್ರ ಸಂಜೀವಿನಿಯಾದ ರಾಮರಾಜ್ಯವನ್ನು ಸ್ಥಾಪಿಸಬೇಕೆಂದು ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯರು ಜನರಿಗೆ ಕರೆಕೊಟ್ಟಿದ್ದಾರೆ ಭಾರತ ಹಾಗೂ ಪ್ರಪಂಚದ ಸುಭಿಕ್ಷಕ್ಕಾಗಿ ಶ್ರೀ ಶ್ರೀಯವರು ದೇವರಲ್ಲಿ ಪ್ರಾರ್ಥನೆ ಮಾಡಿದರು. ಗುರುಪೂರ್ಣಿಮಾ ಮಹೋತ್ಸವ ವೈಭವದಿಂದ ನೆರವೇರಿತು. ರಾಜಕುಮಾರಿ ಪ್ರಭಾವತಿರಾಜೆಯವರು 24ನೆ ತಾ|| ಬೆಳಿಗ್ಗೆ ಇಲ್ಲಿಗೆ ಆಗಮಿಸುವರು

SHAKTI SUDHA

A Superb Tonic

ರಾ ಮ ಗಾ ಜ್ಯ ಪ ರಿ ಷ ತ್

ಸ್ವಾಮಿ ಕರಪಾತ್ರಿ ಮಹಾರಾಜರು ಇತ್ತೀಚೆಗೆ ದಿಲ್ಲಿಯಲ್ಲಿ ಪತ್ರಿ ಕೋದ್ಯೋಗಿಗಳನ್ನು ಉದ್ದೇಶಿಸಿ, ' ರಾಮರಾಜ್ಯ ಪರಿಷದವು ಮನು, ಶಂಕರ ಬೃಹಸ್ಪತಿ ಮತ್ತು ಕೌಟಿಲ್ಯರ ತತ್ವಗಳನ್ನು ಅವಲಂಬಿಸಿಕೊಂಡಿರುವ ರಾಜಕೀಯ ಪಕ್ಷ ' ಎಂದು ಹೇಳಿರುವುದೆಂದು ದಿಲ್ಲೀ ವರದಿಯೊಂದು ಹೇಳುತ್ತಿದೆ. ರಾಮ ರಾಜ್ಯ ಪರಿಷದವರು ಮಹಾ ಚುನಾವಣೆಗಳಲ್ಲಿ ಸ್ಪರ್ಧಿಸಲು ನಿಶ್ಚೈಸಿರುವರು. ಆ ಪಕ್ಷವು ಚುನಾವಣೆಯಲ್ಲಿ ಜಯ ಪಡೆದರೆ ' ನ್ಯಾಯ ಮತ್ತು ನೀತಿಗಳನ್ನು ಆಧರಿಸಿಕೊಂಡಿರುವ ಸರಕಾರವನ್ನು ಸ್ಥಾಪಿಸಲು ಬದ್ಧಕಂಕಣವಾಗುವುದು ' ಎಂಬುದಾಗಿಯೂ ದಿಲ್ಲೀ ವರದಿಯಲ್ಲಿ ಹೇಳಲಾಗಿದೆ

ರಾಮರಾಜ್ಯ ಪರಿಷದ ಚುನಾವಣಾ ಘೋಷಣೆಯು ' ಕಾಂಗ್ರೆಸ್, ಸೋಷಲಿಸ್ಟ್ ಮತ್ತು ಕಮ್ಯೂನಿಸ್ಟ್‌ರ ಕಡೆಯಿಂದ ಹೊರಡುವ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರ ಭಾವ ' ಎಂಬ ಕೂಗಿಗೆ ಅರ್ಥವಿಲ್ಲ ಸಹಾಗೂ ಆಧಾರವೂ ಇರುವುದಿಲ್ಲ. ಏಕೆಂದರೆ, ಈ ಪಕ್ಷಗಳು, ದೇವರು ಮತ್ತು ಧರ್ಮವು ಮಾನವತೆಯ ಪ್ರಗತಿಗೆ ಅಡ್ಡಿಯಾಗಿವೆ ಎನ್ನುತ್ತಿವೆ ' ಎಂದು ಟೀಕಿಸುತ್ತದೆ.

ಘೋಷಣೆಯು ಮುಂದೆ ಈ ರೀತಿ ಆಶ್ವಾಸನೆ ಕೊಡುತ್ತಿದೆ— ' ಖಾಸಗಿ ಸೊತ್ತುಗಳ ರಾಷ್ಟ್ರೀಕರಣದಿಂದ ಸಮತೂಕವಾದ ಆರ್ಥಿಕತೆ ಹೊಂದುವುದು ಸಾಧ್ಯವಿಲ್ಲ. ಏಕೆಂದರೆ, ರಾಷ್ಟ್ರೀಕರಣವೆಂದರೆ ಕೇವಲ ಭಂಡವಾಳಗಾರರ ಬದಲಾವಣೆ ಸರಕಾರವು ಖಾಸಗೀ ಸೊತ್ತುಗಳನ್ನು ಮತ್ತು ಸಾಹಸಗಳನ್ನು ಪ್ರೋತ್ಸಾಹಿಸಬೇಕು. ರಾಮರಾಜ್ಯ ಪರಿಷದವು ಅಧಿಕಾರಕ್ಕೆ ಬಂದರೆ ದೇಶದ ಆರ್ಥ ವಿತರಣದ ಗೋಜಿಗೆ ಹೋಗದೆ ಪ್ರತಿಯೋರ್ವ ವ್ಯಕ್ತಿಗೆ ಯೋಗ್ಯತಾನುಸಾರ ವೃದ್ಧಿಗೊಳ್ಳಲು ಸುಸಂದರ್ಭವನ್ನು ಒದಗಿಸಿಕೊಡುವುದು. ಸಾಧ್ಯವಾದರೆ ವಿಭಜಿಸಿ ಹೋದ ಭಾರತವನ್ನು ಕೂಡಿಸಲು ಪರಿಷದವು ಯತ್ನಿಸುವುದು ಕಾಶ್ಮೀರದ ಪ್ರಶ್ನೆಯನ್ನು ಭದ್ರತಾ ಸಮಿತಿಯಿಂದ ಹಿಂದೆಗೆಯಿಸಲಾಗುವುದು : ಕಾರ್ಮುವೆಲ್ತ್ ಮತ್ತು ಯುಕ್ತರಾಷ್ಟ್ರ ಸಂಘಗಳಿಂದಲೂ ಭಾರತವು ಹಿಂದೆಗೆಯುವುದು. ಸರಕಾರದ ಕಡೆಯಿಂದ ಧಾರ್ಮಿಕ ಶಿಕ್ಷಣ ಒದಗಿಸಿಕೊಡುವೆವು. ಗೋವಧೆಯನ್ನು ನಿಲ್ಲಿಸುವೆವು. ಭಗ್ನಾವಶೇಷಹೊಂದಿದ ಧಾರ್ಮಿಕ ಸ್ಥಳಗಳ ಜೀರ್ಣೋದ್ಧಾರ ಕೈಕೊಳ್ಳಲಾಗುವುದು ಕೈಗಾರಿಕೆಗಳ ವಿಕೇಂದ್ರೀಕರಣವನ್ನು ಪರಿಷದವು ಕಾರ್ಯರೂಪಕ್ಕೆ ಹಚ್ಚುವುದು ' — ಪ್ರ. ಮಂ.

ವ ನ ಮ ಹೋ ತ್ಸ ವ

ಮೈಸೂರು ಜು 18— ರಾಜಧಾನಿಯ ಪೌರಸಭೆಯ ಮುನಿಸಿಪಲ್ ಇಂಡಿಜಿನಸ್ ಆಸ್ಪತ್ರೆಯಲ್ಲಿ ವನಮಹೋತ್ಸವವು ವೈಭವವಾಗಿ ಆಚರಿಸಲ್ಪಟ್ಟಿತು. ಪೌರಸಭಾಧ್ಯಕ್ಷ ಶ್ರೀ ಟಿ ನರಸಿಂಹಯ್ಯಂಗಾರ್ಯರೂ, ಮುನಿಸಿಪಲ್ ಕಮಿಷನರ್ ಶ್ರೀ ಸ್ವಾಮಿನಾಥನ್‌ರವರೂ, ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರೂ, ಪೌರ ಸಭಾ ಉಪಾಧ್ಯಕ್ಷ ಶ್ರೀ ನಂಜಪ್ಪನವರೂ ಒಂದೊಂದು ಗಿಡವನ್ನು ನೆಟ್ಟರು. ದೇವತಾ ಪ್ರಾರ್ಥನೆ, ಸ್ವಾಗತ ಭಾಷಣದಿಂದ ಪ್ರಾರಂಭವಾದ ಈ ಸಮಾರಂಭವು ಅಧ್ಯಕ್ಷರ ಭಾಷಣ, ಫಲಪುಷ್ಪ ವಿನಿಯೋಗ, ರಾಷ್ಟ್ರಗೀತೆಯೊಡನೆ ಪರಿಸಮಾಪ್ತಿಗೊಂಡಿತು.

ರೆಲೆ ಕಾರ್ಮಿಕ ಸಂಪಿಗೆ ಲವ

ಆಂಧ್ರ ಕೇಸರಿಯ ಬೆಂಬಲ !

ಭಾರತ ರಾಷ್ಟ್ರಾಧಿಪರು ಹೊರಡಿಸಿರುವ ಸುಗ್ರೀವಾಜ್ಞೆ ತಪ್ಪಾಗಿದೆ. ರೈಲ್ವೆ ಕಾರ್ಮಿಕರು ಹೂಡಬೇಕೆಂದಿರುವ ಮುಷ್ಕರ ಕ್ರಮ ಬದ್ಧವಾದುದಾಗಿದೆ ಎಂದು ಆಂಧ್ರ ಪ್ರಜಾ ಪಕ್ಷದ ಮುಂದಾಳುಗಳಲ್ಲಿ ಒಬ್ಬರಾದ ಶ್ರೀ ಟಿ. ಪ್ರಕಾಶಂ ಅವರು ರಾಜಿನಲ್ಲಿ ತಿಳಿಸಿದ್ದಾರೆ. ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಮುಷ್ಕರ ಹೂಡುವ ಅಧಿಕಾರ ಕಾರ್ಮಿಕರಿಗಿದೆಯೆಂದು ಶ್ರೀ ಪ್ರಕಾಶಂ ಹೇಳಿಕೆ.

ದಿ ವ್ಯ ವಾ ಣಿ

ನಿಮ್ಮ ಕೋಪ ತಾಪಗಳಿಗೆ ಕಾರಣವಾದ ವಿಷಯಗಳಿಗಿಂತಲೂ ಸ್ವತಃ ಆ ಕೋಪ ತಾಪಗಳಿಂದಲೇ ನಿಮಗೆ ಹೆಚ್ಚು ಕ್ಲೇಶವಾಗುವದೆಂಬುದನ್ನು ಗಮನಿಸಿರಿ

— ಆಂಟೋನಿಯಸ್

ಜಯಪ್ರಕಾಶರ ಉಪವಾಸ

1946 ನೇ ವರ್ಷದ ಮುಷ್ಕರ ಕಾಲದ ಸಂಬಳವನ್ನು ಪೋಸ್ಟಲ್ ಕೆಲಸಗಾರರಿಗೆ ದೊರಕಿಸಿ ಕೊಡಲಾಗದ್ದಿದ್ದಕ್ಕಾಗಿ ಪ್ರಾಯಶ್ಚಿತ್ತಾರ್ಥ ಶ್ರೀ ಜಯಪ್ರಕಾಶ ನಾರಾಯಣರು 3 ವಾರಗಳ ಕಾಲ ಉಪವಾಸ ಕೂಡಲಿರುವರೆಂದು ನವದೆಹಲಿ ವಾರ್ತೆ.

ಮುಂದಿನ ಪಾಹೆ 27 ರ ಬೆಳಿಗ್ಗೆ 6 ಗಂಟೆಗೆ, ರೈಲ್ವೆ ಕೆಲಸಗಾರ ಬೇಡಿಕೆ ಈಡೇರದಿದ್ದರೆ ಮುಷ್ಕರ ಪ್ರಾರಂಭವಾಗುವದೆಂದು ಶ್ರೀ ಜಯಪ್ರಕಾಶ ನಾರಾಯಣರು ಅಲಹಾಬಾದಿನಲ್ಲಿ ತಿಳಿಸಿದ್ದಾರೆ

ಸೇನಿಕರು ಉತ್ತರ ಬಿಹಾರದ ಬರ ಸೀಡಿಕರಿಗಾಗಿ 221 ಟ್ರಕ್ ಗೋಧಿ ಕಳಿಸಿರುವದಾಗಿ ಕಲ್ಕತ್ತಾ ವಾರ್ತೆ.

ಮೈಸೂರು ಶ್ರೀವನ್ಯಹಾರಾಜರನ್ನು ಕಾಶ್ಮೀರಕ್ಕೆ ಸಂದರ್ಶನವೀಯುವಂತೆ ಅಲ್ಲಿನ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲ ಆಹ್ವಾನಿಸಿರುವದಾಗಿ ಬೆಂಗಳೂರು ವಾರ್ತೆ ತಿಳಿಸುತ್ತದೆ.

ಪಾಟಿಯಾಲಾ ಸಂಸ್ಥಾನದಲ್ಲಿ ಸೋಡಾ ಉಪ್ಪನ್ನು ರೇಷನ್ ಕಾರ್ಡಿನ ಮೇಲೆ ನಿಯಂತ್ರಿತ ಬೆಲೆಗೆ ಹಂಚಲಾಗುವದು ಇದರ ದಾಸ್ತಾನನ್ನು ವಶಪಡಿಸಿಕೊಳ್ಳಲು ಸರ್ಕಾರಿ ಆಜ್ಞೆಯಾಗಿದೆ.

ಭಾರತ ಕಾರ್ಮಿಕ ಸಚಿವ ಶ್ರೀ ಜಗಜೀವನರಾಂರವರು ಬೆಂಗಳೂರಿನ ಸಮಾರಂಭವೊಂದರಲ್ಲಿ ಭಾಷಣ ಮಾಡುತ್ತಾ ಮಜೂರರೆಂದರೆ ಗೌರವ ಭಾವನೆ ಉಂಟಾಗಬೇಕೆಂದರು.

ಡಾ|| ನಾರಾಯಣ ದಾಸ ಜೋಪ್ರ ಎಂಬವರಿಗೆ ಯಾರ್ಕ್‌ಷೈರಿನ ಜಸ್ಟಿಸ್ ಸ್ಟ್ರೀಟ್‌ಫೀಲ್ಡರು ಮೂರು ವರ್ಷ ಸಜೆ ವಿಧಿಸಿರುವರು. ಇವರು ಷಫೀಲ್ಡ್‌ನಲ್ಲಿರುವ ಡಾರ್ವಿನ್ಸ್ ಉಕ್ಕಿನ ಸಂಸ್ಥೆ ಅಧ್ಯಕ್ಷರಾಗಿದ್ದರು. ಮೋಸದ ಅಪಾದನೆಗಾಗಿ ಶಿಕ್ಷೆ ಆಯಿತು.

ನವದೆಹಲಿಯಲ್ಲಿ ಶ್ರೀಮತಿ ಅರುಣ ಅಸಫ್ ಅಲಿಯವರು ಹೇಳಿಕೆಯಿತ್ತು ಸಮಾಜವಾದಿ ಎಡಪಕ್ಷವು ಮಹಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದಿರುವರು

ಬೊಂಬಾಯಿ ಕೋಟಿ

ವಿಭಾಗದಲ್ಲಿ ಅನ್ನಪೂರ್ಣ ಮಂದಿರವನ್ನು ತೆರೆಯಲಾಗಿದೆ. ರೇಷನ' ಅಲ್ಲದ ಧಾನ್ಯದಿಂದ ಇಲ್ಲಿ ಎಂಟಾಣೆಗೆ ಊಟ ಒದಗಿಸಲಾಗುವದು.

ಕಾಶ್ಮೀರ ಕಲಹ ನಿವಾರಣೆಗೆ ಸಹಕಾರ ನೀಡಿರಿ ಭಾರತ ಏಷ್ಯ ಹಾಗೂ ವಿಶ್ವದ ಶಾಂತತೆಗೆ ಬೆದರಿಕೆ ಹಾಕಿದೆಯೆಂದು ನ್ಯೂಯಾರ್ಕಿನ ಹೆರಾಲ್ಡ್ ಟ್ರಿಬ್ಯೂನ್' ಸಂಪಾದಕೀಯ ಬರೆದಿದೆ.

ನ್ಯೂಯಾರ್ಕಿನಲ್ಲಿ ಮೊನ್ನೆ ನಿಗ್ರೋ ವಿನೊಬ್ಬನ ತಲೆಯಿಂದ ಆರೂವರೆ ಅಂಗುಲದ ಚಾಕುವನ್ನು 7 ವರೆ ಗಂಟೆಕಾಲ ಶಸ್ತ್ರಚಿಕಿತ್ಸೆ ಮಾಡಿ 4 ವೈದ್ಯರು ಹೊರತೆಗೆದರು.

ರೈಲು ಮತ್ತು ಅಂಚೆ ಮುಷ್ಕರ ಸಮಾಜವಾದಿಗಳ ರಾಜಕೀಯ ಜೂಜಾಟವೆಂದು ದೆಹಲಿ ವಾರ್ತೆ.

ರೈಲ್ವೆ ಸಂಪು ನಡೆದಲ್ಲಿ ಕೆಲಸ ಕಾರ್ಯಗಳು ಸಾಧಾರಣ ನಡೆಯಲು ಸೂಚನೆ ಇತ್ತಿರುವದಾಗಿ ಬೊಂಬಾಯಿನಲ್ಲಿ ರೈಲ್ವೆ ಸಚಿವರು ತಿಳಿಸಿದ್ದಾರೆ.

ಇತರ ದೇಶಗಳಲ್ಲಿ ಅಮೇರಿಕಾದ ವ್ಯಾಪಾರ ಬಂಡವಾಳವು 1300 ಕೋಟಿ ಡಾಲರುಗಳಷ್ಟಿವೆಯೆಂದು ಹೇಳಲಾಗಿದೆ

77 ವರ್ಷದ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿ ಅನೇಕ ಹೇಳಿಕೆಗಳನ್ನು ಕೊಟ್ಟ ಕ್ಯಾಂಟರ್ಬರಿ ಡೀನರು ಇದೇ ತಾನೇ ಮಾಸ್ಕೋವೆಸಂದ ಲಂಡನ್‌ಗೆ ಆಗಮಿಸಿರುವರು. ಅವರನ್ನು ಸಾರ್ವಜನಿಕರೆದುರು ಗಲ್ಲಿಗೇರಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಕಮ್ಯುನಿಸ್ಟರ ತೀವ್ರ ವಿರೋಧಿಸರ್ ವಾಲ್ಟರ್ ಸ್ಮಿದರ್ಸ್ ತಿಳಿಸಿದರು.

ಕೈರೋದಲ್ಲಿ ಪೆಟ್ರೋಲ್ ರೇಷನ್ ಜಾರಿಗೆ ಬರುವ ಸಂಭವವಿದೆ.

Kann. (Eng. 471)

ಯುದ್ಧ ಮತ್ತು ರೋಗ

ಎಲ್ಲಾ ದೇಶಗಳ ಚರಿತ್ರೆ ಲೇಖಕರು ಬರೆದಿರುವ ಪ್ರಪಂಚ ಚರಿತ್ರೆಯು ಪೂರ್ಣ ಜನಾಂಗಗಳ ಅದೃಷ್ಟವನ್ನೇ ತೀರ್ಮಾನಿಸಿದ ಯುದ್ಧ ಮತ್ತು ಹೊಡೆದಾಟಗಳನ್ನೇ ಪದೇಪದೇ ತಿಳಿಸುತ್ತದೆ ಈ ಸಂಬಂಧದ ಪಾಳ್ಯೆಗಳನ್ನು ನಾವು ಪರೀಕ್ಷಿಸಿದರೆ, ಈ ಕದನದಲ್ಲಿನ ಜಯಾಪಜಯಗಳು ಯಾವಾಗಲೂ ಪ್ರತಿಭೆ ಅಥವಾ ಅದಿಲ್ಲದಿರೋಣದರ ಮೇಲೆ ಅವಲಂಬಿಸಿದ್ದಿಲ್ಲವೆಂಬುದನ್ನು ಅರಿಯಲು ಆಶ್ಚರ್ಯವಾಗುತ್ತದೆ. ಆದರೆ ಇವು ಯುದ್ಧರಂಗದಸೇನೆಯ ಆರೋಗ್ಯವನ್ನು ಖೀಳಕಡಹುವ ರೋಗಗಳ ಮೇಲೆ ಅನೇಕಾವರ್ತಿ ನಿರ್ಧರಿಸಲಾಗಿದೆ.

ಈ ಬಗ್ಗೆ ವನಸ್ಸಿಗೆ ನಾಟುವಂತಹ ಒಂದು ಉದಾಹರಣೆಯೆಂದರೆ· ಬಹು ಮಂದಿ ಸೈನಿಕರು ಖಾಯಿಲೆಯಿಂದ ನರಳಾಟದ ಕಾರಣಕ್ಕಾಗಿ ಮಾಸ್ಕೋ ಎನಿಂದ ನೆಪೋಲಿಯನ್ನಿನ ವಿಖ್ಯಾತ ವಾಪಸಾತ್ರೆ.ದಾಗಿದೆ. ಇಂತಹ ಯುದ್ಧಗಳ ಲ್ಲಿಯೂ ಅಂಕಿ ಅಂಶಗಳು ಅಗಾಧವಾಗಿಯೇ ಇದ್ದುವು. ಕ್ರಿಮಿಯೂ ಯುದ್ಧ ದಲ್ಲಿ 50,000 ಫ್ರೆಂಚರು, 17 000 ಬ್ರಿಟಿಷರು, ಮತ್ತು 37,000 ರಷ್ಯನ್ನರು ಸಾಂಕ್ರಾಮಿಕ ವ್ಯಾಧಿಗಳಿಂದ ನರಳಿದರು. ಎರಡು ಪ್ರಪಂಚ ಮಹಾ ಯುದ್ಧ ಗಳಲ್ಲೂ, ರೋಗಗ್ರಸ್ತರಾದವರ ಸಂಖ್ಯೆ ಬಹು ಹೆಚ್ಚಾಗಿದ್ದಿತು. ಬಹುಹೆಚ್ಚು ಸೈನಿಕರ ಹೋಗಿಬರೋಣದರಿಂದ, ಮಲೇರಿಯ ಅಗಾಧವಾಗಿ ಹರಡಿತು.

ಮುಖ್ಯವಾಗಿ ಈ ಮಲೇರಿಯಾ ಖಾಯಿಲೆಯು ಅಂತಹ ಆಪತ್ತನ್ನು ಒದಗಿಸಕ್ಕದ್ದಾಗಿದೆ ಅದಕ್ಕಾಗಿ ವೈದ್ಯಕೀಯ ಶಾಸ್ತ್ರವು ಈ ಸಮಸ್ಯೆ ಯನ್ನು ದೀರ್ಘ ಪರಿಶೋಧನೆಗಾಗಿ ಒಳಪಡಿಸಿದೆ. ಮುಖ್ಯವಾಗಿ ಹಿಂದಿನ ಲೀಗ್ ಆಫ್ ನೇಷನ್ನಿನವರು ನೇಮಿಸಿದ್ದ ನಿಪುಣ ಮಲೇರಿಯಾ ಕಮಿಷನ್ನವರ ಕಾರ್ಯವನ್ನು ನಾವು ನಮೂದಿಸಲಿಚ್ಛಿಸುತ್ತೇವೆ, ಅವರು 1938 ರಲ್ಲಿ ಒಂದು ಮಂದಿ ಪ್ರಕಟಿಸಿ ಪೂರ್ತಾ ವ ಲೇರಿಯಾ ಕಾಲದಲ್ಲಿ ದಿನವಹಿ 6 ಗ್ರೇನು ಕ್ವಿನೈನು ಸೇವನೆಯನ್ನೂ ಮತ್ತು ರೋಗಕ್ಕೆ ಉಗ್ರವಾಗಿ ತುತ್ತಾದಾಗ 5-7 ದಿನಗಳು ದಿನವಹಿ 15 ರಿಂದ 20 ಗ್ರೇನು ಕ್ವಿನೈನು ಸೇವನೆಯನ್ನೂ ಶಿಫಾರಸ್ ಮಾಡಿರುತ್ತಾರೆ

For Quality Printing

L. N. Press

Sivarampet, Mysore

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕಿನ ಪಟ್ಟಿಗಳು,

ಮೈಸೂರು

- ಸುರುಳಿ,
- ಬೌಕೋನ,
- ಸರಳುಗಳು,
- ಮೂಲೆಗಂಬಗಳು
- ಬೀಲುಕಟ್ಟುಗಳು

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾಸ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್



From the daily newspaper THE SIOUX CITY JOURNAL, Sioux City, Iowa, U. S. A.

— ಸ್ವಾಲಿನ್ನಿನ ಶಾಂತಿ ಆಟ —

Protect the Cow

Edited, Printed and Published by M. S. Krishna Rao, at the Satyavadi Press Chamrajpuram Mysore

ಸಂಪುಟ ೯ ಸಂಚಿಕೆ ೪೫ ॥ಶ್ರೀ॥ ತಾ॥ 23-7-1951

— ಪ್ರಬೋಧ —

ಶ್ರೀ. ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದ ಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಸಿಂಹಳ ದ್ವೀಪವು ಲಂಕೆಯಲ್ಲ

(ಮುಂದುವರಿದುದು)

ಕಾಲಕ್ರಮದಿಂದ ಹಲವಾರು ದ್ವೀಪಗಳೂ ಸಮುದ್ರ ಗರ್ಭದಲ್ಲಿ ಪ್ರವೇಶಿಸುತ್ತದೆ. ಹೀಗೆಂದು ಸ್ಕಾಂದದ ಪ್ರಭಾಸ ಖಂಡದ ೧೭೨ ನೇ ಅಧ್ಯಾಯದಲ್ಲಿ ಹೇಳಿಯೂ ಇದೆ—

ಭಂತೋ ನಾಮ ರಾಜಾಭೂದಾಗ್ನೀಧ್ರಃ ಪೃಥಿವೀಕ್ಷಿತಾ । ಯಸ್ಯೇದಂ ಭಾರತಂವರ್ಷಂ ನಾವ್ನಾಲೋಕೇಷು ಗೀಯತೇ ॥
ಭಾರತಂ ಸವಧಾಕೃತ್ವಾ ಪುತ್ರೇಭ್ಯಃ ಪ್ರದದೌ ಪೃಥಕ್ । ಜೇಷ್ಠಾಂ ನಾಮಾಂ ಕಿತಾನ್ಯೇವ ತತೋದ್ವೀಪಾನಿ ಜಜ್ಞಿರೇ ॥
ಇಂದ್ರದ್ವೀಪಃ ಕಸೇರುಶ್ಚ ತಾಮ್ರಪರ್ಣೋ ಗಭಸ್ತಿಮಾನ । ನಾಗದ್ವೀಪಸ್ತಥಾ ಸೌಮ್ಯೋ ಗಾಂಧರ್ವ ಸ್ತ್ವಥ ವಾರುಣಃ ॥
ಅಯಂ ತು ಸವನೋದ್ವೀಪಃ ಕುಮಾರ್ಯಾಸಂಜ್ಞಿತಸ್ತ್ರಿಯಃ । ಅಷ್ಟೌ ದ್ವೀಪಾಃ ಸವಾರ್ದ್ರೇಣಪ್ಲಾವಿತಾಶ್ಚ ತಥಾಪರೇ ॥
ಗಾವ್ಯಾದಿದೇಶಸಂಯುಕ್ತಾಃ ಸ್ಥಿತಾಃ ಸಾಗರಮಧ್ಯಗಾಃ । ಏಕ ಏವ ಸ್ಥಿತಸ್ತೇಷಾಂ ಕುಮಾರ್ಯಾಖ್ಯಸ್ತು ಸಾಂಪ್ರತಂ ॥

ಇದರಿಂದ, ಆ ಕಾಲದಲ್ಲಿ ಪುತ್ರರಿಗೆ ಸಮಾನ ವಿಭಾಗವಾದ್ದರಿಂದ, ಭಾರತ ವರ್ಷದ ಒಂಭತ್ತೂ ಭಾಗಗಳ ವಿಸ್ತಾರವು ಸರ್ವಾನುವಾಗಿತ್ತೆಂದು ಗೊತ್ತಾಗುವುದು. ಕಾಲಕ್ರಮದಿಂದ ಆ ಎಂಟು ದ್ವೀಪಗಳ ಹಲವು ಭಾಗಗಳು ಸಮುದ್ರದಲ್ಲಿ ಸೇರಿದ ದೆಸೆಂದ ಅತಿ ಸ್ವಲ್ಪ ಭಾಗಗಳಿಂದ ಅವುಗಳ ಅವಶೇಷವು ಈಗ ತೋರುತ್ತದೆ. (ಕ್ರಮಸಂಖ್ಯಾನುಸಾರವಾಗಿ ಮೇಲಿನ 9 ದ್ವೀಪಗಳ ಈಗಿನ ಹೆಸರುಗಳು ಇವು :— 1 ಅಂದಮಾನ, 2 ಸೆಲೆಬೀಸ್, 3 ಸಿಲೋನ್ 4 ಮಲಕ್ಕಾ, 5 ನಿಕೋಬಾರ್, 6 ಸುಮಾತ್ರಾ, 7 ಫಿಲಿಪೈನ್— ಜಾವ್ಹಾದ್ವೀಪಸಮೂಹ 8 ಬೋರ್ನಿಯೋ 9 ಭರತಖಂಡ) — ಈ ರೀತಿಯಿಂದ ಲಂಕಾದ್ವೀಪವೂ ಕೂಡ ಸಮುದ್ರಗರ್ಭ ಪ್ರವಿಷ್ಟವಾದ್ದರಿಂದ ವಿಲುಪ್ತವಾಗಿರಬಹುದು. ಆದರೆ ಇಷ್ಟು ಮಾತ್ರದಿಂದ ಒಂದು ಸ್ಥಳವನ್ನು ಇನ್ನೊಂದು ಸ್ಥಳದ ಸಂಜ್ಞೆಯಿಂದ ಕರೆಯುವುದು ಎದ್ವಾಂಸರಿಗೆ ಯುಕ್ತವಾದುದಲ್ಲ ಆದಕಾರಣ ಸಿಂಹಳಕ್ಕೆ ಲಂಕಾಶಬ್ದ ಪ್ರಯೋಗವು ಅತ್ಯಂತಅಜ್ಞಾನನಿಮಿತ್ತವೆಂದು ತಿಳಿಯಬೇಕು.

(೧೨) ಅಥವಾ ಈ ಲಂಕೆಯ ಭಗ್ನಾವಶೇಷ ಚಿಹ್ನವು ಈಗಲೂ ಇದ್ದೇಇದೆ ಹೇಗೆಂದರೆ, ಈಗ ಸಿಂಹಳ ದ್ವೀಪದಿಂದ ಪಶ್ಚಿಮಕ್ಕೆ ಅನತಿದೂರದಲ್ಲಿ ' ಲಕ್ಕೇದೀವ್ ' (Lakkadiv = Laccadive) ಎಂಬ ಯಾವ ಉಪದ್ವೀಪವಿದೆಯೋ ಅದೇ ಹಿಂದೆ ಲಂಕಾದ್ವೀಪವಾಗಿದ್ದಿತೆಂದು ನಿಶ್ಚೈಸುತ್ತೇವೆ ಅದು ಲಂಕಾದ್ವೀಪವಾಗಲು ಅರು ಕಾರಣಗಳಿವೆ.

೧. ಲಕ್ಕೇದೀವ್ ಎಂಬುದರಲ್ಲಿ ನಾಮ-ಸಾದೃಶ್ಯವು ಕಾಣುವುದರಿಂದ ಅವಶ್ಯವಾಗಿ ಆದು ಲಂಕಾದ್ವೀಪ ಶಬ್ದದ ಇಲ್ಲವೆ ರಕ್ಕೋದ್ವೀಪ ಶಬ್ದದ ಅಪಭ್ರಂಶವಾಗಿಂಬೇಕೆಂಬುದು ಒಂದನೆಯದು. (ಶಕೇಷ)

ಅನಂತ ಶ್ರೀ ವಿಭೂಷಿತ ಪ. ಪ. ಪೂ. ಪಾ.
ಶ್ರೀ ಜಗದ್ಗುರು ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀ ಅಭಿನವ
ಸಚ್ಚಿದಾನಂದತೀರ್ಥ ಸ್ವಾಮಿಗಳವರು

ಸೂರತ್ತಿನಲ್ಲಿ ಶ್ರೀದ್ವಾರಕಾ ಜಗದ್ಗುರುಗಳವರು

(ಸ್ವಂತ ಸುದ್ದಿಗಾರರಿಂದ ಕಂತಿ)

ಸೂರತ್ ಜುಲೈ 16 - ಅಹಮದಾಬಾದಿನಲ್ಲಿ ಅನೇಕ ಚಟುವಟಿಕೆಗಳ ಉದ್ಯತ ಕಾರ್ಯಕ್ರಮಗಳನ್ನು ಪೂರೈಸಿಕೊಂಡು, ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳವರು ನಿನ್ನೆ ದಿವಸ ಸೂರತ್ತಿಗೆ ಆಗಮಿಸಿ, ಅತ್ಯಾದರದಿಂದ ಸ್ವಾಗತಿಸಲ್ಪಟ್ಟರು. ಶ್ರೀ ಜಗದ್ಗುರುಗಳವರು ಸೂರತ್ತಿನ ವಿಠಲವಾಡಿಯಲ್ಲಿ ತಮ್ಮ ಚಾತುರ್ಮಾಸ್ಯ ಉಪನ್ಯಾಸಗಳನು ಭಾರಿ ಸಭೆಯಲ್ಲಿ ಪ್ರಾರಂಭಿಸಿದರು. ಸಾರ್ವಜನಿಕರು ತಮ್ಮ ಮತ್ತು ದೇಶದ ಪುರೋಭಿವೃದ್ಧಿಗಾಗಿ ಸನಾತನಧರ್ಮವನ್ನು ಅನುಸರಿಸಬೇಕೆಂದು ತಿಳಿಸಿದರು. ತಾ ॥ 18 ನೇ ಬುಧವಾರ ಗುರುಪೂರ್ಣಿಮವು ಅತಿ ವೈಭವದಿಂದ ನಿರ್ವಹಿಸಲಾಗುವುದು.

ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಪ್ರಭಾವತಿ ರಾಜೆ ರವರು ಬುಲ್ಸಾರಿಗೆ ತಾ ॥ 23 ರಲ್ಲೂ, ಸೂರತ್ತಿಗೆ 24 ರಲ್ಲೂ, ಬರೋಡಾಕ್ಕೆ 26 ರಲ್ಲೂ, ಅಹಮದಾಬಾದಿಗೆ 27 ರಲ್ಲೂ, ರಾಮರಾಜ್ಯ ಪರಿಷತ್ತಿನ ಸಂಘಟನೆ ಪ್ರವಾಸ ಬಗ್ಗೆ, ದಯಮಾಡಿಸಲಿರುವರು. ಪ್ರತಿ ಸ್ಥಳದಲ್ಲೂ ವೈಭವ ಸ್ವಾಗತ ಇತ್ಯಾದಿ ಏರ್ಪಾಡುಗಳಾಗುತ್ತಿವೆ.

ರಾಮರಾಜ್ಯ ಸ್ಥಾಪಿಸಿ

[ಸ್ವಂತ ಸುದ್ದಿಗಾರರಿಂದ ತಂತಿ] ಸೂರತ್, ಜುಲೈ 20 : ಪ್ರಕೃತ ತೊಂದರೆಗಳಿಗೆ ಏಕಮಾತ್ರ ಸಂಜೀವಿನಿ ಯಾದ ರಾಮರಾಜ್ಯವನ್ನು ಸ್ಥಾಪಿಸಬೇಕೆಂದು ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯರು ಜನರಿಗೆ ಕರೆಕೊಟ್ಟಿದ್ದಾರೆ. ಭಾರತ ಹಾಗೂ ಪ್ರಪಂಚದ ಸುಭಿಕ್ಷಕ್ಕಾಗಿ ಶ್ರೀ ಶ್ರೀಯವರು ದೇವರಲ್ಲಿ ಪ್ರಾರ್ಥನೆ ಮಾಡಿದರು. ಗುರುಪೂರ್ಣಿಮಾ ಮಹೋತ್ಸವ ವೈಭವದಿಂದ ನೆರವೇರಿತು. ರಾಷ್ಟ್ರಕುಮಾರಿ ಪ್ರಭಾವತಿರಾಜೆಯವರು 24ನೆ ತಾ ॥ ಬೆಳಿಗ್ಗೆ ಇಲ್ಲಿಗೆ ಆಗಮಿಸುವರು